**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 1012 /2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಆಶಾ ಕೆ ಎಂ | **ಚಾ.ಸಾ.-4** |
| **ಗಂಡನ ಹೆಸರು** | - | ಡಾಃ ಎಂ ಶಿವಣ್ಣ | **ಫ್ರಾ.ಸಾ.-5** |
| **ವಯಸ್ಸು** | - | 60 ವರ್ಷ | |
| **ಉದ್ಯೋಗ** | - | ಸಹಕಾರ ಸಂಘಗಳ ಜಂಟಿ ನಿರ್ದೇಶಕರು, ಬೆಂಗಳೂರು | |
| **ವಾಸಸ್ಥಳ** | - | ಬೆಂಗಳೂರು | |

ದಿನಾಂಕಃ 08-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

2014 ರಲ್ಲಿ ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ, ಗೆಜ್ಜಲಗೆರೆ ರವರು 145 ಹುದ್ದೆಗಳಿಗೆ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ನಾನು ನೇಮಕಾತಿ ಸಮಿತಿಯ ಸದಸ್ಯಳಾಗಿದ್ದು, ಸಹಕಾರ ಸಂಘಗಳ ನಿಂಬಕರ ಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸಿರುತ್ತೆನೆ. ನೇಮಕಾತಿ ಸಮಿತಿಯ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಅಭ್ಯರ್ತಿಗಳ ಸಂದರ್ಶನ ನಡೆಸಿರುತ್ತೇನೆ. ನಿಯಮಾನುಸಾರ ತೇರ್ಗಡೆ ಹೊಂದಿದ್ದ ಅಭ್ಯರ್ಥಿಗಳ 1/5 ಸಂದರ್ಶನಕ್ಕೆ ಆಯ್ಕೆ ಮಾಡಿದ್ದು, ಸದರಿ ಸಂದರ್ಶನದಲ್ಲಿ ನಾನು ಸಹ ಸಮಿತಿಯ ಸದಸ್ಯಳಾಗಿ ಹಾಜರಿರುತ್ತೆನೆ. ಸಂದರ್ಶನದ ನಂತರ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಒಕ್ಕೂಟಕ್ಕೆ ಆಯ್ಕೆ ಸಮಿತಿ ನೀಡಿರುತ್ತೇವೆದೆ. ಅದರಂತೆ ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ಒಕ್ಕೂಟದಿಂದ ನೇಮಕಾತಿ ಆದೇಶವನ್ನು ನೀಡಿರುತ್ತಾರೆ. ನೇಮಕಾತಿ ಆದೇಶ ನೀಡಿದ ನಂತರ ಸದರೀ ಅಭ್ಯರ್ಥಿಗಳಿಗೆ ಸಂಬಂಧಿಸಿದ ಮೂಲ ಅಂಕಪಟ್ಟಿಗಳು ಹಾಗೂ ಅವರಿಗೆ ಸಂಬಂಧಿಸಿದ ದಾಖಲಾತಿಗಳ ನೈಜತೆ ಪರೀಕ್ಷೆಗಾಗಿ ಸಂಬಂಧಪಟ್ಟ ಬೋರ್ಡ್ ಹಾಗೂ ಯುನಿವರ್ಸಿಟಿಗೆ ಒಕ್ಕೂಟದ ವತಿಯಿಂದ ಕಳುಹಿಸಿಕೊಡುತ್ತಿರುವಾಗ, ಸದರಿ ಎಂಡಿ ರವರು ನನಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ನೈಜತೆಗೆ ಕಳುಹಿಸಿದ ಅಭ್ಯರ್ಥಿಗಳ ಅಂಕಪಟ್ಟಿಗಳು ನಕಲಿಯಿಂದ ಕೂಡಿ ಬಂದಿದೆ ಎಂದು ಕಂಡು ಬಂದ ಕಾರಣದಿಂದ, ಸದರಿ ಅಭ್ಯರ್ಥಿಗಳ ಮೇಲೆ ಸಂಬಂಧಪಟ್ಟ ರವರಿಗೆ ದೂರು ನೀಡುವುದಾಗಿ ನನಗೆ ತಿಳಿಸಿರುತ್ತಾರೆ. ಸದರಿ ಅಭ್ಯರ್ಥಿಗಳ

ಹೆಸರು ನನಗೆ ಈಗ ನೆನಪಿಲ್ಲ. ನಾನು ಈ ಕುರಿತು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-**

ಆರೋಪಿ 1 ರವರು ಸಲ್ಲಿಸಿದ್ದ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಬಿಎ ಪದವಿಯ ಅಂಕಪಟ್ಟಿ ನಕಲಿ ಎಂದು ನಿಮಗೆ ತಿಳಿಸಿರುತ್ತಾರೆಂದರೆ ಸರಿ. ಅದೇರೀತಿ ಎಂ ಅಶೋಕ್ ರವರು ಸಲ್ಲಿಸಿದ್ದ ಐಟಿಐ ಫಿಟ್ಟರ್ ವೃತ್ತಿ ತರಬೇತಿಯ ಅಂಕಪಟ್ಟಿ ಯು ನಕಲಿ ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸರಿ. ಜಿ ಎಸ್ ಸಂದೀಪ್ ರವರು ಯೂನಿವರ್ಸಿಟಿ ರಾಜಸ್ತಾನ, ಬಿಎ ಪದವಿಯ ಅಂಕಪಟ್ಟಿಯು ನಕಲಿ ಎಂದು ನಿಮಗೆ ತಿಳಿಸಿರುತ್ತಾರೆಂದರೆ ಸರಿ. ಕಾರ್ತಿಕ್ ಕೆ.ವಿ ರವರ ಪಿಯುಸಿ ಅಂಕಪಟ್ಟಿಯು ನಕಲಿ ಎಂದು ನಿಮಗೆ ತಿಳಿಸಿರುತ್ತಾರೆಂದರೆ ಸರಿ. ಆರೋಪಿ 1 ರವರು ಜಗದೀಶ್ ಮಡಿವಾಳ ಮತ್ತು ಆರೋಪಿ 2 ಸಂದೀಪ್ ರವರು ನೀಡಿರುವ ನಕಲಿ ಅಂಕಪಟ್ಟಿಯ ಬಗ್ಗೆ ನೀವು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿ. ನೀವು ನೇಮಕಾತಿ ಸಮಿತಿಯ ಸದಸ್ಯರಾಗಿ ದಿ 17-08-2015 ರಿಂದ ದಿ 25-08-2015 ರವರೆಗೆ 498 ಅಭ್ಯರ್ಥಿಗಳನ್ನು ನೇಮಕಾತಿ ಸಮಿತಿಯ ಸದಸ್ಯರ ಜೊತೆ ಸಂದರ್ಶನ ಮಾಡಿರುತ್ತೀರಿ ಎಂದರೆ ಸರಿ. ಸದರಿ ಸಂದರ್ಶನದಲ್ಲಿ 129 ಅಭ್ಯರ್ಥಿಗಳು ಆಯ್ಕೆ ಯಾಗಿದ್ದು, ಸದರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ದಿ 11-09-2015 ರಂದು ನಡೆದ 329 ನೇ ಆಡಳಿತ ಮಂಡಳಿ ಸಭೆಯಲ್ಲಿ ಸಹಕಾರ ಇಲಾಖೆಯ ಪ್ರತಿನಿಧಿಯಾಗಿ ನೀವು ಭಾಗವಹಿಸಿರುತ್ತೀರಿ ಎಂದರೆ ಸರಿ. ಸದರಿ ಸಭೆಯಲ್ಲಿ 129 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಅನುಮೋದಿಸಲಾಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರುಃ ಶ್ರೀ ಸಿಎಸ್ ರವರಿಂದ**

ಆರೋಪಿತರು ಸಲ್ಲಿಸಿದ್ದ ಮೂಲ ಅಂಕಪಟ್ಟಿಯನ್ನು ನಾನು ನೋಡಿಲ್ಲ. ವಿಶ್ವ ವಿದ್ಯಾನಿಲಯದಿಂದ ಬಂದ ಅಂಕಪಟ್ಟಿಯ ಮೂಲ ಪ್ರತಿಯನ್ನು ನಾನು ನೋಡಿಲ್ಲ. ನಾನು ಅರ್ಜಿಯನ್ನು ಸಹಿ ಮಾಡಿ ವಿಶ್ವ ವಿದ್ಯಾನಿಲಯಕ್ಕೆ ಕಳುಹಿಸಿಕೊಟ್ಟಿಲ್ಲ. ವ್ಯವಸ್ಥಾಪಕ ನಿರ್ದೇಶಕರ ಕೋರಿಕೆಯ ಮೇರೆಗೆ ಈ ದಿನ ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಪದವಿಯ ಅಂಕಪಟ್ಟಿ ಕೊಟ್ಟಿದ್ದರು ಎಂದು ನನಗೆ ನೆನಪಿಲ್ಲ. ಆರೋಪಿತರು ಪದವಿ ಪಡೆದಿರುತ್ತಾರೆಂದರೆ, ಹುದ್ದೆಗೆ ತಕ್ಕಂತೆ ಶೈಕ್ಷಣಿಕ ಅರ್ಹತೆಯನ್ನು

ಪಡೆದಿರುತ್ತಾರೆ. ಆರೋಪಿತರು ಯಾವ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು ಎಂದು ನನಗೆ ನೆನಪಿಲ್ಲ. ಯಾವುದೇ ವ್ಯಕ್ತಿ ದಾಖಲೆಗಳು ಸರಿ ಇದ್ದರೆ ಅವರನ್ನು ಆಯ್ಕೆ ಮಾಡುತ್ತೆವೆಂದರೆ ಸರಿ. ಸಂಘದ ಆಡಳಿತ ಮಂಡಳಿಯ ನಿರ್ಣಯದ ತೀರ್ಮಾನಗಳನ್ನು ಅನುಷ್ಟಾನಗೊಳಿಸುವುದು ಕಾರ್ಯಕಾರಿ ಮಂಡಳಿಯ ಜವಾಬ್ದಾರಿಯಾಗಿರಿರುತ್ತದೆ ಎಂದರೆ ಸರಿ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ನಿಮ್ಮ ಮೇಲಾಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಿಶ್ವ ವಿದ್ಯಾನಿಲಯಕ್ಕೆ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಕಳು ಹಿಸಿಕೊಟ್ಟಿರುತ್ತೆವೆ. ನೀವು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.